# ಧರ್ಮ

ಧರ್ಮದ ಬಗ್ಗೆ ತುಂಬಾ ಜನರು ಆಲೋಚಿಸುತ್ತಾರೆ. ಧರ್ಮ-ಅಧರ್ಮಗಳ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ವಾಸ್ತವವಾಗಿ ಧರ್ಮವೆಂದರೆ, ಏನೆಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆನು? ಆಗ ನನಗೆ ತಿಳಿದ ವಿಷಯವೇನೆಂದರೆ- ಧರ್ಮ ಎಂದರೂ, ದೈವವೆಂದರೂ, ಪರಮಾತ್ಮನೆಂದರೂ, ಪ್ರಕೃತಿ-ಪುರುಷರೆಂದರೂ, ಸ್ವಚ್ಛವಾದ ಚೈತನ್ಯ-ಸ್ವಚ್ಛವಾದ ಶಕ್ತಿ ಎಂದರೂ ಒಂದೇ ಎಂದು ಮತ್ತು ಇವೆಲ್ಲವೂ ದಿವ್ಯತ್ವದ ಪರ್ಯಾಯ ಪದಗಳೆಂದು ನಾನು ತಿಳಿದುಕೊಂಡೆನು.

ಹಾಗೆಯೇ ನನಗೆ ತಿಳಿದ ಮತ್ತೊಂದು ವಿಷಯವೇನೆಂದರೆ, ದಿವ್ಯತ್ವದಲ್ಲಿ ಮೂರು ಗುಣಗಳು ಸಮಾನ ಅನುಪಾತದಲ್ಲಿ ಬೆರೆತು ಒಂದಾಗಿವೆ ಎಂದು. ಇದರ ಅರ್ಥ, 33.33% ರಜೋಗುಣ, 33.33% ತಮೋಗುಣ ಮತ್ತು 33.33% ಸಾತ್ವಿಕ ಗುಣಗಳು ಇವೆ. ಆದರೆ ದೇವರು ಸೃಷ್ಟಿಸಿರುವ ಶಕ್ತಿಯ ರೂಪಗಳಲ್ಲಿ, ಗುಣಗಳ ಮಿಶ್ರಣ ಎನ್ನುವುದು ವಿವಿಧ ರೀತಿಯಲ್ಲಿ ಇರುತ್ತದೆ. ಈ ರೀತಿಯ ಮಿಶ್ರಣದಲ್ಲಿ ವ್ಯತ್ಯಾಸ ಇರುವುದರಿಂದಲೇ ಪ್ರಕೃತಿಯಲ್ಲಿ ಹಲವಾರು ರೂಪಗಳು ಏರ್ಪಟ್ಟಿವೆ. ಆದುದರಿಂದ ಪ್ರಕೃತಿಯಲ್ಲಿರುವ ಎಲ್ಲಾ ವಸ್ತುಗಳಲ್ಲಿಯೂ ಸಹ ಈ ಮೂರು ಗುಣಗಳು ಎಂದರೆ ಪಾಸಿಟಿವ್-ನೆಗೆಟಿವ್-ನ್ಯೂಟ್ರಲ್ ಅಥವಾ ಪ್ರೊಟಾನ್-ಎಲೆಕ್ಟ್ರಾನ್-ನ್ಯೂಟ್ರಾನ್ ಖಂಡಿತವಾಗಿ ಇರುತ್ತವೆಂದು ಗ್ರಹಿಸಿರಿ.

"ದೈವ"ವು ಎಂದರೇನೆ ಆನಂದ, ಪರಮಾನಂದ. ಅವನಲ್ಲಿ ಮೂರೂ ಗುಣಗಳು ಸಮಾನ ಅನುಪಾತದಲ್ಲಿ ಒಂದಾಗಿ ಬೆರೆತಿರುವುದರಿಂದಲೇ ಅವನು ಸದಾ ಆನಂದದಿಂದ ಇರುತ್ತಾನೆ. ನಾವು ಇಂಥಹ ಆನಂದದ ಸ್ಥಿತಿಗೆ ತಲುಪಲು ಹಲವಾರು ಮಾರ್ಗಗಳು ಇವೆ. ನಾನು ಸೂಚಿಸಿದ "ಕರಗಿ ಹೋಗಿ" ಸಾಧನೆ ಅಥವಾ "ಧ್ಯಾನ" ಮಾಡುವ ಮೂಲಕವೂ ಸಹ ನೀವು ದೇವರ ಸನ್ನಿಧಿಯನ್ನು ಸೇರಬಹುದು.

ನಾವು ದೈವವನ್ನು ತಲುಪಿದ ನಂತರ ಆನಂದದ ಅನುಭೂತಿಯನ್ನು ಹೊಂದುತ್ತಿದ್ದೇವೆ, ಆದರೆ ಕಣ್ಣುಗಳನ್ನು ತೆರೆದ ತಕ್ಷಣ ಮತ್ತೇ ಮಾಯೆಯ ಪ್ರಭಾವಕ್ಕೆ ಒಳಗಾಗುತ್ತಿದ್ದೇವೆ. ಎಂದರೆ ಶರೀರದಲ್ಲಿ, ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ಉಂಟಾದ ಆನಂದವನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ. ಇದಕ್ಕೆ ಕಾರಣವೇನೆಂದು, ನನ್ನನ್ನು ನಾನು ಪ್ರಶ್ನಿಸಿಕೊಂಡೆನು? ಆಗ ನನಗೆ ಬಂದ ಸಂದೇಶವೇನೆಂದರೆ, "ಧ್ಯಾನದಿಂದ ಹೊರ ಬಂದ ತಕ್ಷಣ ನೀವು ಮೂರು ಗುಣಗಳಲ್ಲಿ ಯಾವುದಾದರೂ ಒಂದು ಗುಣವನ್ನು ಆಯ್ದುಕೊಂಡು ಇನ್ನುಳಿದ ಎರಡು ಗುಣಗಳೊಂದಿಗೆ ಯುದ್ಧವನ್ನು ಮಾಡುತ್ತಿದ್ದೀರಿ. ಇದರಿಂದಾಗಿಯೇ ನೀವು ದಿವ್ಯತ್ವದ ಅನುಭೂತಿಯನ್ನು ಶರೀರ, ಮನಸ್ಸು, ಹೃದಯದಲ್ಲಿ ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಸ್ಥಿತಿಯಲ್ಲೂ ಮೂರೂ ಗುಣಗಳನ್ನು ಆಯ್ದುಕೊಂಡು ಒಂದಾಗಿಸಬೇಕು" ಎನ್ನುವ ಸಂದೇಶ ಬಂದಿತು.

## ಶರೀರ

ನಾವು ಸಾಮಾನ್ಯವಾಗಿ ಶಾರೀರಕ ಸ್ಥಿತಿಯಲ್ಲಿ ಸದಾ ಆರೋಗ್ಯವಂತರಾಗಿ ಇರಬೇಕೆಂದು ಬಯಸುತ್ತೇವೆ. ಹೀಗೆ ಬಯಸುವುದು ಅಧರ್ಮದಿಂದ ಕೂಡಿದ ನಿರ್ಣಯವೆಂದು ನನ್ನೊಳಗಿನಿಂದ ಬಂದಿತು. ಏಕೆಂದರೆ ಧರ್ಮದಲ್ಲಿ ಮೂರು ವಿರುದ್ಧ ಗುಣಗಳು ಸಮಾನ ಅನುಪಾತದಲ್ಲಿ ಬೆರೆತು ಒಂದಾಗಿ ಇರುತ್ತವೆ. ಎಂದರೆ ಆರೋಗ್ಯ-ಅನಾರೋಗ್ಯ-ತಟಸ್ಥ, ಈ ಮೂರು ಸಮಾನ ಅನುಪಾತದಲ್ಲಿರುತ್ತವೆ. ಆದುದರಿಂದ ಈ ಮೂರನ್ನೂ ಆಯ್ಕೆ ಮಾಡಿಕೊಳ್ಳಬೇಕೆಂದು ನನ್ನೊಳಗಿನಿಂದ ಬಂದಿತು. ಏಕೆಂದರೆ ಅನಾರೋಗ್ಯದ ಲಕ್ಷಣಗಳಾದ ಕೆಮ್ಮು, ಶೀತ,

ನೋವುಗಳು, ಮರಗಟ್ಟುವಿಕೆ, ವಾಕರಿಕೆ ಇತ್ಯಾದಿ ನಮಗೆ ನಿತ್ಯ ಜೀವನದಲ್ಲಿ ಅತ್ಯವಶ್ಯಕ. ಇವು ಪ್ರತಿ ದಿನ ಕಾರ್ಯ ನಿರ್ವಹಿಸುತ್ತಿದ್ದರೆ ಮಾತ್ರ, ಶರೀರದಲ್ಲಿ ಏರ್ಪಡುವ ಅನಾವಶ್ಯಕ ಮತ್ತು ಅನಗತ್ಯವಾದ ಎಲ್ಲವೂ ಹೊರ ಬರುತ್ತವೆ.

ಹಾಗೆಯೇ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗೆ ತಕ್ಕಂತೆ ಶರೀರವು ತನ್ನಷ್ಟಕ್ಕೆ ತಾನು ಶೃತಿಗೊಳ್ಳುತ್ತಾ ಸದಾ ಅಭಿವೃದ್ಧಿ ಹೊಂದುತ್ತಲೇ ಇರುತ್ತದೆ. ಯಾವ ರೀತಿ ಮೊಬೈಲ್ 2G ಯಿಂದ 3G ಗೆ ನವೀಕರಿಸಬೇಕೆಂದಾಗ (ಅಪ್ ಡೇಟ್) ಕೇವಲ ಸಿಮ್ ಬದಲಾಯಿಸಿದರೆ ಸಾಕಾಗದು, ಹಾರ್ಡ್ ವೇರ್ ಎಂದರೆ ಮೊಬೈಲ್ ನ್ನೂ ಸಹ ನವೀಕರಿಸಬೇಕು. ಅದೇ ರೀತಿಯಲ್ಲಿ ನೀವು ಪ್ರಗತಿ ಹೊಂದಬೇಕೆಂದರೆ ನಿಮ್ಮ ಭಾಗಗಳಾದ ಶರೀರ, ಮನಸ್ಸು, ಹೃದಯ ಇತ್ಯಾದಿಗಳೆಲ್ಲವೂ ಅಭಿವೃದ್ಧಿ ಹೊಂದಬೇಕು. ಆದ್ದರಿಂದ ನಿಮ್ಮಲ್ಲಿಯ ಭಾಗಗಳಲ್ಲಿ ಉನ್ನತವಾದ ಸ್ಥಿತಿ ನೆಲೆಸಬೇಕೆಂದರೆ- ಅನಾರೋಗ್ಯ, ಆರೋಗ್ಯ ಮತ್ತು ತಟಸ್ಥ ಶಕ್ತಿಗಳು ಏಕಕಾಲದಲ್ಲಿ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸುವುದು ಅತ್ಯವಶ್ಯಕ. ಆದುದರಿಂದ ನೀವು ಶಾರೀರಕ ಸ್ಥಿತಿಯಲ್ಲೂ ಮೂರನ್ನು ಆಯ್ದುಕೊಂಡು ಅವುಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸಬೇಕು. ಇಲ್ಲದಿದ್ದರೆ ಶರೀರದಲ್ಲಿ ಧರ್ಮ ಸ್ಥಾಪನೆ ಸಂಭವಿಸುವುದು ಅಸಾಧ್ಯ. ಎಂದರೆ ಶರೀರದಲ್ಲಿ ದಿವ್ಯತ್ವವು ಪ್ರವೇಶಿಸುವುದು ಅಸಂಭವ. ಇನ್ನಷ್ಟು ಮಾಹಿತಿ ಪಡೆಯಲು "ಅಂತರ್ ಪ್ರಯಾಣ" ಮತ್ತು "ಶರೀರ" ಎನ್ನುವ ವಿಷಯಗಳನ್ನು ಓದಿರಿ.

## ಮನಸ್ಸು

ಮಾನಸಿಕ ಸ್ಥಿತಿಯಲ್ಲೂ ಸಹ ಮೂರು ಗುಣಗಳನ್ನು ಆಯ್ಕೆ ಮಾಡಿಕೊಳ್ಳಿರಿ. ಎಂದರೆ ನಮಗೆ ಮನಸ್ಸಿನಲ್ಲಿ ಸದಾ ಒಮ್ಮೆ ಒಂದೇ ಆಲೋಚನೆ ಉಂಟಾಗುತ್ತದೆ. ಇದರ ಅರ್ಥ, ಒಳ್ಳೆಯ ಆಲೋಚನೆ ಅಥವಾ ಕೆಟ್ಟ ಆಲೋಚನೆ ಅಥವಾ ತಟಸ್ಥ ಆಲೋಚನೆ ಉಂಟಾಗುತ್ತದೆ. ನೀವು ಈ ಆಲೋಚನೆಯನ್ನು ತಕ್ಷಣ ಆಯ್ಕೆ ಮಾಡಿಕೊಂಡರೆ ನೀವು ಅಧರ್ಮ ಮಾಡಿದಂತಾಗುತ್ತದೆ. ಏಕೆಂದರೆ ನೀವು ಎಲ್ಲಾ ಮೂರು ಆಲೋಚನೆಗಳನ್ನು ಆಯ್ಕೆ ಮಾಡಿಕೊಂಡಿಲ್ಲವಾದ್ದರಿಂದ.

ಮನಸ್ಸಿನಲ್ಲಿ "ತೆಗಳು" ಎನ್ನುವ ಆಲೋಚನೆ ಬಂದ ತಕ್ಷಣ ನೀವು ಅದನ್ನು ಆಯ್ಕೆ ಮಾಡಿಕೊಳ್ಳದೇ, ನಾನು ತೆಗಳು-ಹೊಗಳು-ತಟಸ್ಥ ಈ ಮೂರು ಸಮಾನ ಅನುಪಾತದಲ್ಲಿ ಮಿಶ್ರಣಗೊಂಡ ಸ್ವಚ್ಛವಾದ ಶಕ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆಂದುಕೊಳ್ಳಿರಿ. ಅದೇ ರೀತಿ ಹೊಗಳು ಎನ್ನುವ ಆಲೋಚನೆ ಬಂದಾಗಲೂ ಸಹ ನೀವು ತಕ್ಷಣ ಅದನ್ನು ಆಯ್ಕೆ ಮಾಡಿಕೊಳ್ಳದೇ, ನಾನು ತೆಗಳು-ಹೊಗಳು-ತಟಸ್ಥ ಈ ಮೂರು ಸಮಾನ ಅನುಪಾತದಲ್ಲಿ ಮಿಶ್ರಣಗೊಂಡ ಸ್ವಚ್ಛವಾದ ಶಕ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆಂದುಕೊಳ್ಳಿರಿ.

ಹೀಗೆ ಪ್ರತಿದಿನ ಯಾವ ಆಲೋಚನೆ ಬಂದರೂ ಅದಕ್ಕೆ ಸಂಬಧಪಟ್ಟ ಮೂರು ಆಲೋಚನೆಗಳನ್ನು ಆಯ್ಕೆ ಮಾಡಿಕೊಂಡು ಸ್ವಲ್ಪ ಸಮಯ ಕಾದು ನಿರೀಕ್ಷಿಸಿ. ಪ್ರಶಾಂತವಾದ ಸ್ಥಿತಿಯನ್ನು, ಸಮತೋಲನದ ಸ್ಥಿತಿಯನ್ನು ತಲುಪಿದ ನಂತರವೇ ಏನನ್ನಾದರೂ ಮಾಡಲು ಸಿದ್ಧರಾಗಿರಿ. ಈ ರೀತಿಯ ಮಾನಸಿಕ ಸಮತೋಲನದ ಸ್ಥಿತಿಯಲ್ಲಿ ಇದ್ದಾಗಲೇ ನಿಮಗೆ ದಿವ್ಯತ್ವದೊಂದಿಗೆ ಸಂಪರ್ಕ ಏರ್ಪಡುತ್ತದೆ. ಈ ರೀತಿ ನಿರಂತರವಾಗಿ ಮಾನಸಿಕ ಸ್ಥಿತಿಯಲ್ಲಿ ಸಾಧನೆಯನ್ನು ಮುಂದುವರೆಸಿದರೆ ಖಂಡಿತವಾಗಿ ನೀವು ಮನಸ್ಸಿನಲ್ಲೇ ಧರ್ಮ ಸ್ಥಾಪನೆಯನ್ನು ಮಾಡಲು ಸಾಧ್ಯವಾಗುತ್ತದೆ. ಮನಸ್ಸನ್ನು ತೊರೆದು ದೇವರ ಸನ್ನಿಧಿಯನ್ನು ತಲುಪುವ ಅಗತ್ಯವಿಲ್ಲದೇ ದೇವರೇ ನಿಮ್ಮ ಮನಸ್ಸಿನೊಳಗೆ ಪ್ರವೇಶಿಸುತ್ತಾನೆ. ಏಕೆಂದರೆ ಆಗ ಮೂರು ಗುಣಗಳ ಮಿಲನದಿಂದಾಗಿ ನಿಮ್ಮ ಮನಸ್ಸು ಸ್ವಚ್ಛವಾಗಿ, ಪ್ರಶಾಂತವಾಗಿ ತಯಾರಾಗಿರುತ್ತದೆ.

## ಹೃದಯ

ಹೃದಯದಲ್ಲಿ ಒಳ್ಳೆಯ-ಕೆಟ್ಟ-ತಟಸ್ಥ ಭಾವನೆಗಳಿರುತ್ತವೆ. ನಿಮಗೆ ಭಯ ಉಂಟಾದಾಗ ತಕ್ಷಣ ಅದು ಪೂರ್ತಿಯಾಗಿ ಹೋಗಬೇಕೆಂದುಕೊಂಡರೆ ನೀವು ಅಧರ್ಮ ಮಾಡಿದಂತಾಗುತ್ತದೆ. ಆದುದರಿಂದ "ಭಯ, ನೀನು ತಪ್ಪದೇ ನನ್ನಲ್ಲಿರಬೇಕು ಆದರೆ 33.33% ಮಾತ್ರವೇ ಇರಬೇಕು". ಇನ್ನುಳಿದ ಶಕ್ತಿಯನ್ನು ಇನ್ನೆರಡು ಗುಣಗಳಿಗೆ ಹಂಚಿ ಮೂರೂ ಸಮಾನವಾಗಿದ್ದು, ಬೆರೆತು ಒಂದಾಗಿ ಹೋಗಿ ಎಂದು ಹೇಳಿರಿ. ಅದೇ ರೀತಿ ಹೆಚ್ಚು ಧೈರ್ಯ ಇದ್ದಾಗಲೂ ಸಹ ಅದನ್ನು 33.33% ಮಾತ್ರವೇ ಇರಬೇಕೆಂದು ಹೇಳಿರಿ. ಹೀಗೆ 33.33% ಗಿಂತ ಕಡಿಮೆ ಇದ್ದರೆ ಹೆಚ್ಚಿಸಿಕೋ ಎಂದು, 33.33% ಗಿಂತ ಹೆಚ್ಚಾಗಿದ್ದರೆ ತಗ್ಗಿಸಿಕೋ ಎಂದು ಸೂಚನೆ ನೀಡಿ ಮೂರು ಗುಣಗಳನ್ನು ಸಮಾನ ಅನುಪಾತದಲ್ಲಿ ನೆಲೆಸಿಕೊಂಡು ಹೃದಯದಲ್ಲಿ ಧರ್ಮ ಸ್ಥಾಪನೆ ಮಾಡಿರಿ.

ಸಾಮಾನ್ಯವಾಗಿ ಕೆಟ್ಟ ಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ನಮ್ಮಲ್ಲಿ ಉಂಟಾದಾಗ- ಇನ್ನೂ ಆಧ್ಯಾತ್ಮಿಕವಾಗಿ ಪ್ರಗತಿ ಹೊಂದುತ್ತಿಲ್ಲವೇನೋ, ಸಾಧನೆಯನ್ನು ಸರಿಯಾಗಿ ಮಾಡುತ್ತಿಲ್ಲವೇನೋ, ತಪ್ಪು ಮಾಡುತ್ತಿರುವೆನೇನೋ ಎನ್ನುವ ಭಾವನೆ ನಮ್ಮಲ್ಲಿ ಏರ್ಪಟ್ಟು, ಅಪರಾಧ ಭಾವನೆ ನಮ್ಮಲ್ಲಿ ಹೆಚ್ಚಾಗುತ್ತದೆ. ಆದರೆ ಎಲ್ಲವೂ ಸಮಾನ ಅನುಪಾತದಲ್ಲಿ ಇರಬೇಕು ಎನ್ನುವ ಭಾವನೆಯಿಂದ ನಾನು ಸೂಚಿಸಿದ ಸಾಧನೆಯನ್ನು ಮಾಡಿದರೆ ನಿಮ್ಮಲ್ಲಿಯ ಅಪರಾಧದ ಭಾವನೆ ಮಾಯವಾಗುತ್ತದೆ.

ಏಕೆಂದರೆ ಒಂದಾಗಿ ಇರುವ ಸ್ವಚ್ಛವಾದ ಶಕ್ತಿಯನ್ನು, ಮಾಯೆಯು ಮೂರು ಭಾಗಗಳಾಗಿ ವಿಂಗಡಿಸಿ ತೋರಿಸುತ್ತದೆ. ಆದ್ದರಿಂದ ಮೂರು ಭಾಗಗಳು ತಪ್ಪದೇ ಇರಬೇಕು ಆದರೆ ಸಮಾನ ಅನುಪಾತದಲ್ಲಿ ಇರಬೇಕು. ಆದ್ದರಿಂದ ನಾನು ಮೂರು ಗುಣಗಳಿಗೆ ಪ್ರತಿನಿಧಿ, ಮೂರು ಗುಣಗಳ ಅಧಿಪತಿ ನಾನಾಗಬೇಕು, ನಾನು ಮೂರು ಗುಣಗಳನ್ನು ಜಯಿಸಬೇಕು, ಎನ್ನುವ ಆಸಕ್ತಿ ನಿಮ್ಮಲ್ಲಿ ಹೆಚ್ಚಾಗುತ್ತದೆ. ಇದರಿಂದಾಗಿ, ನನ್ನಲ್ಲಿ 33.33% ಕೆಟ್ಟ ಗುಣಗಳು ಇರುವುದು ತಪ್ಪಲ್ಲವೆನ್ನುವ ಭಾವನೆಯು ನಿಮ್ಮಲ್ಲಿ ಸ್ಥಿರವಾಗುತ್ತದೆ.

ಐದು ಬೆರಳುಗಳು ಪ್ರತ್ಯೇಕವಾಗಿ ಇದ್ದರೂ ಅವುಗಳ ಮಧ್ಯೆ ಸ್ನೇಹಭಾವನೆಯನ್ನು ಏರ್ಪಡಿಸಿ ಏಕಕಾಲದಲ್ಲಿ ಉಪಯೋಗಿಸಿಕೊಳ್ಳಬಹುದು. ಅಥವಾ ಎಲ್ಲವನ್ನೂ ಸೇರಿಸಿ ಒಂದು ಮಾಡಿಯಾದರೂ ಉಪಯೋಗಿಸಿಕೊಳ್ಳಬಹುದು. ಆಗಲೇ ಅವುಗಳಿಗೆ ಬಲವು ಬರುತ್ತದೆ. ಹಾಗೆಯೇ ಮೂರು ವಿರುದ್ಧವಾದವುಗಳು ಪ್ರತ್ಯೇಕವಾಗಿದ್ದಾಗ ಅವುಗಳ ಮಧ್ಯೆ ಸ್ನೇಹವನ್ನು ಸೃಷ್ಟಿಸಿ ಆ ಮೂರನ್ನು ಒಮ್ಮೆಗೇ ಉಪಯೋಗಿಸಿಕೊಳ್ಳಿರಿ. ಅಥವಾ ಮೂರನ್ನು ಬೆರೆಸಿ ಒಂದು ಮಾಡಿ ಉಪಯೋಗಿಸಿಕೊಳ್ಳಿರಿ. ಈ ರೀತಿಯ ಮಿಲನದ ಮಿತ್ರತ್ವದಿಂದಾಗಿ ಏರ್ಪಡುವ ಶಕ್ತಿಯನ್ನೇ ನಾನು ನ್ಯೂ ಎನರ್ಜಿ ಎಂದು ಹೇಳುತ್ತಿದ್ದೇನೆ.

ಹಾಗೆಯೇ ಮೂರು ಗುಣಗಳ ಮಿಶ್ರಣವು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾಗಿರುತ್ತದೆ. ಆದ್ದರಿಂದ ಹೀಗೆ ಮಾಡಿದರೆ, ಹೀಗೆ ಬೆರೆಸಿದರೆ ಇಂಥಹದ್ದೇ ಪರಿಣಾಮ ಒದಗುತ್ತದೆ ಎಂದು ಊಹಿಸದೇ, ಅಂತರಂಗದಲ್ಲಿರುವ ಮೂರು ಗುಣಗಳನ್ನು ಬೆರೆಸುವುದು ಹೇಗೆ ಎನ್ನುವುದರ ಮೇಲೆ ನಿಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿರಿ. ಈ ರೀತಿ ನಿಮ್ಮಲ್ಲಿ ಮೂರು ವಿರುದ್ಧ ಶಕ್ತಿಗಳನ್ನು ಬೆರೆಸುತ್ತಾ ಇದ್ದರೆ ನಿಮಗೆ ಬಾಹ್ಯದಲ್ಲಿ ಮೂರು ತರಹದ ಪರಿಣಾಮಗಳು ಒದಗುತ್ತವೆ. ಆ ಪರಿಣಾಮಗಳನ್ನು ದಿವ್ಯವಾಗಿ ಅನುಭವಿಸುತ್ತಾ, ಬಾಹ್ಯದಲ್ಲಿ ಫಲಿಸಿದ ಶಕ್ತಿಗಳನ್ನು, ನಿಮ್ಮೊಳಗಿರುವ

ಮಿಶ್ರಣದಲ್ಲಿ ಬೆರೆಸಿದರೆ, ನಿಮ್ಮ ಮಿಶ್ರಣದಲ್ಲಿ ಬದಲಾವಣೆ ಬರುತ್ತದೆ. ಹೀಗೆ ಸಾಧನೆಯನ್ನು ಮುಂದುವರೆಸಿದರೆ ಮೂರು ಗುಣಗಳು ಸಮಾನ ಅನುಪಾತವನ್ನು ಹೊಂದಿ ಒಂದಾಗುತ್ತವೆ.

ಮತ್ತೊಂದು ವಿಷಯವೇನೆಂದರೆ, ಗತದಲ್ಲಿ ಮೂರು ಗುಣಗಳ ಅನುಭವಗಳನ್ನು ಪ್ರತ್ಯೇಕವಾಗಿ ಹೊಂದಿದವರೇ ನಾನು ಸೂಚಿಸುವ ಜ್ಞಾನವನ್ನು ಆಚರಿಸಲು ಅರ್ಹರು. ಆದ್ದರಿಂದ ಕೇವಲ ತಮೋಗುಣದ ಅನುಭವಗಳನ್ನು ಪಡೆಯುತ್ತಿರುವವರ ಧರ್ಮವೇನೆಂದರೆ, ಅವರು ಆ ಗುಣಕ್ಕೆ ಮಾತ್ರ ಪ್ರಾಧಾನ್ಯತೆಯನ್ನು ನೀಡುತ್ತಾ ಇನ್ನುಳಿದ ಎರಡು ಗುಣಗಳನ್ನು ತಿರಸ್ಕರಿಸುವುದು. ಕೇವಲ ರಜೋ ಗುಣದ ಅನುಭವಗಳನ್ನು ಪಡೆಯುತ್ತಿರುವವರ ಧರ್ಮವೇನೆಂದರೆ, ಅವರು ಆ ಗುಣಕ್ಕೆ ಮಾತ್ರ ಪ್ರಾಧಾನ್ಯತೆಯನ್ನು ನೀಡುತ್ತಾ ಇನ್ನುಳಿದ ಎರಡು ಗುಣಗಳನ್ನು ತಿರಸ್ಕರಿಸುವುದು. ಅದೇ ರೀತಿ ಕೇವಲ ಸಾತ್ವಿಕ ಗುಣದ ಅನುಭವಗಳನ್ನು ಪಡೆಯುತ್ತಿರುವವರ ಧರ್ಮವೇನೆಂದರೆ, ಅವರು ಆ ಗುಣಕ್ಕೆ ಮಾತ್ರ ಪ್ರಾಧಾನ್ಯತೆಯನ್ನು ನೀಡುತ್ತಾ ಇನ್ನುಳಿದ ಎರಡು ಗುಣಗಳನ್ನು ತಿರಸ್ಕರಿಸುವುದು. ಆದುದರಿಂದ ಇಲ್ಲಿ ಧರ್ಮವೆನ್ನುವುದು ಅವರವರ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತದೆಂದು ಗ್ರಹಿಸಿಕೊಳ್ಳಿರಿ.

## ಪರಿಣಾಮಗಳು

ಈ ರೀತಿ ಕಣ್ಣುಗಳನ್ನು ಮುಚ್ಚಿಕೊಂಡಾಗ ಕರಗಿಹೋಗುವ ಸಾಧನೆ, ಕಣ್ಣುಗಳನ್ನು ತೆರೆದುಕೊಂಡಿರುವಾಗ ಮೂರು ಗುಣಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಧನೆ ಮಾಡುವುದರಿಂದ ತುಂಬಾ ಜನರಿಗೆ ಅದ್ಭುತವಾದ ಪರಿಣಾಮಗಳು ಒದಗುತ್ತಿವೆ. ವಿಶಾಖಪಟ್ಟಣದಲ್ಲಿ ದಂಪತಿಗಳಿಬ್ಬರೂ ಒಂದು ತಿಂಗಳವರೆಗೆ ಹೀಗೆ ಮಾಡುವುದರಿಂದಾಗಿ 10 ವರ್ಷಗಳಿಂದ ಮಾರಾಟವಾಗದ ತಮ್ಮ ಜಮೀನು ಮಾರಾಟವಾಗಿದೆ. ಮತ್ತೊಬ್ಬರಿಗೆ ಕಳುವಾದ ಬಂಗಾರ ದೊರಕಿದೆ. ಒಬ್ಬ ಮಹಿಳೆಗೆ ಪ್ರತಿ ತಿಂಗಳು ಸಹಿಸಸಲಾರದಂಥಹ ಮುಟ್ಟಿನ ನೋವುಂಟಾಗುತ್ತಿತ್ತು. ಈ ಜ್ಞಾನ ತಿಳಿದ ನಂತರ, ನೋವಿಗೆ ಕೇವಲ 33.33% ನಷ್ಟು ನೋವು ಇರಬೇಕೆಂದು ಸಂಕಲ್ಪ ಮಾಡಿಕೊಂಡಿರುವುದರಿಂದ ಆ ನೋವು ಕಡಿಮೆಯಾಗಿದೆ. ಮತ್ತೊಬ್ಬನು, ಬಂಗಾರಕ್ಕೆ ಆಕರ್ಷಿತನಾಗುವ ಅಭ್ಯಾಸವಿರುವವನು, ಈ ಸಾಧನೆ ಮಾಡುವುದರಿಂದಾಗಿ ಅವನಲ್ಲಿ ಬಂಗಾರದ ವ್ಯಾಮೋಹ ತಗ್ಗಿದೆ.

ಪ್ರತಿದಿನ 20 KM ಅಪ್ ಅಂಡ್ ಡೌನ್ ಪ್ರಯಾಣಿಸಬೇಕೆಂದು ಪತ್ನಿಯು ಪತಿಗೆ ಬಲವಂತ ಮಾಡುತ್ತಿದ್ದಳು. ಈ ರೀತಿ ಬಲವಂತಪಡಿಸುವುದನ್ನು ಪತಿಯು ತುಂಬಾ ದ್ವೇಷಿಸುತ್ತಿದ್ದನು. ಈ ಜ್ಞಾನವನ್ನು ತಿಳಿದುಕೊಂಡ ಪತಿಯು ಬಲವಂತದ ಎನರ್ಜಿಯನ್ನು 33.33% ಇರಬೇಕೆಂದು ಅಂತರಂಗದಲ್ಲಿ ಹೇಳಿಕೊಳ್ಳುವುದರಿಂದ, ಬಾಹ್ಯದಲ್ಲಿ ಪತ್ನಿಯಲ್ಲಿ ಬದಲಾವಣೆ ಉಂಟಾಗಿ, "ಪ್ರತಿ ದಿನ ಪ್ರಯಾಣ ಮಾಡುವುದರಿಂದಾಗಿ ತುಂಬಾ ಸುಸ್ತಾಗಿ ಹೋಗುತ್ತೀರಿ", ರಜೆ ಇದ್ದಾಗ ಬಂದು ಹೋಗಿರೆಂದು ಪತಿಗೆ ಹೇಳಿದಳಂತೆ. ಹಾಗೆಯೇ ತುಂಬಾ ಜನರು, ತಮ್ಮ ಅಂತರಂಗದಲ್ಲಿ ಪ್ರಶಾಂತತೆ ಮತ್ತು ಆನಂದ ಇರುತ್ತದೆಂದು ಹೇಳುತ್ತಿದ್ದಾರೆ. ಆದುದರಿಂದ ನೀವು ಸಹ ಅಂತರಂಗದಲ್ಲಿ ಧರ್ಮ-ಸ್ಥಾಪನೆಯನ್ನು ಮಾಡಿ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಿರಿ.

**ಕಾಣಿಕೆಗಳು-Donations**

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ.

A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422, A/C No: 30603897922. MOBILE No: 9390151912 - THIS NUMBER ALSO HAS GooglePay AND PhonePe.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

http://darmam.com/downloads/telugutopics/4.dharmam.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen)

https://www.youtube.com/playlist?list=PL7sfndcUtXfluvXK-CsihXrxGyyljh8n6

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

http://darmam.com/important-topics.html